# ಮಿನಿಯೇಚರ್ ಆಹಾರ!

■ ಈರಣ್ಣ ಬೆಂಗಾಲಿ



ಆಹಾರ–ಖಾದ್ಯಗಳ ತದ್ರೂಪಿ ಮಿನಿಯೇಚರ್ ರೂಪಿಸುವುದು ದೀಪಾ ತ್ಯಾಗರಾಜ್ ಹವ್ಯಾಸ. ಥೇಟ್ ತಿಂಡಿ ತಿನಿಸಿನಂತೆಯೇ ಕಾಣುವ ಪುಟ್ಟ ಕಲಾಕೃತಿಗಳು ಮನಸ್ಸು ತುಂಬಿಸುತ್ತವೆ.









ತಟ್ಟೆಯಲ್ಲಿ ತುಂಬಿಟ್ಟ ಲಡ್ಡು, ಬಟ್ಟಲಿನಲ್ಲಿ ಪೇರಿಸಿಟ್ಟ ಜಾಮೂನು, ಬಾಯಲ್ಲಿ ನೀರೂರಿಸುವ ಮಸಾಲೆ ದೋಸೆ, ಅಷ್ಟೇ ಏಕೆ, ಈಗಷ್ಟೇ ತಯಾರಾದ ಇಡ್ಲಿ... ಒಮ್ಮೆ ರುಚಿ ನೋಡಿಯೇ ಬಿಡುವ ಎನಿಸುವಂತೆ ಮಾಡುವ ಇವು ನಿಜವಾದ ಆಹಾರ ಪದಾರ್ಥಗಳಲ್ಲ, ಮಿನಿಯೇಚರ್ ಕಲಾಕೃತಿಗಳು.

ಥೇಟ್ ಆಹಾರ ಪದಾರ್ಥಗಳನ್ನೇ ಹೋಲುವ ಪುಟ್ಟ ಪುಟ್ಟ ಕಲಾಕೃತಿಗಳನ್ನು ನೋಡುತ್ತಿದ್ದರೆ ಅಚ್ಚರಿಯ ಜೊತೆಗೆ ಕಲೆಯ ಸಾಧ್ಯತೆಗಳ ಹೊಸ ಆಯಾಮವೂ ಕಾಣುತ್ತದೆ. ಸೆಂಟಿ ಮೀಟರ್ ಗಾತ್ರಗಳಲ್ಲಿ ರೂಪು ಪಡೆದುಕೊಂಡಿರುವ ಆಹಾರ ಪದಾರ್ಥಗಳ ಈ ಪಡಿಯಚ್ಚುಗಳು ಹುಬ್ಬೇರಿಸುವಂತೆ ಮಾಡುತ್ತವೆ. ಕೆಜಿಎಫ್ ಮೂಲದ, ಸದ್ಯ ಬೆಂಗಳೂರಿನಲ್ಲಿ ನೆಲೆಸಿರುವ ದೀಪಾ ತ್ಯಾಗರಾಜ್ ಅವರದ್ದು ಈ ಕಲಾಕೃತಿಗಳ ಹಿಂದಿನ ಕೈ.

ಎಂಬಿಎ ಪದವೀಧರರಾದ ದೀಪಾ, ಐಟಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದವರು. ಮದುವೆ–ಮಕ್ಕಳಾದ ನಂತರ ತಮ್ಮ ಬಾಲ್ಯದ ಕನಸನ್ನು ನನಸು ಮಾಡಿಕೊಳ್ಳಲು ಮುಂದಾದರು. ವಿವಿಧ ಚಿತ್ರಕಲಾ ಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಆರಂಭಿಸಿ ಹಲವು ಕಲಾಕೃತಿಗಳನ್ನು ರೂಪಿಸಿದರು.

ಮಿನಿಯೇಚರ್‌ನಲ್ಲಿ ಆಹಾರ ಪದಾರ್ಥಗಳನ್ನು ರೂಪಿಸುವುದು ದೀಪಾ ಅವರಿಗೆ ಮೆಚ್ಚಿನ ಸಂಗತಿ. ಬಗೆಬಗೆಯ ಆಹಾರ ಪದಾರ್ಥಗಳ ಕಲಾಕೃತಿಗಳನ್ನು ನೈಜ ಎನ್ನುವಂತೆ ರೂಪಿಸುವ ಕಲೆ ಕೆಲ ದಿನಗಳಲ್ಲೇ ಅವರಿಗೆ ಒಲಿಯಿತು. ಹಣ್ಣು ಹಂಪಲು, ತರಕಾರಿ, ಸಿಹಿ ಪದಾರ್ಥಗಳು, ಕುರುಕಲು ತಿಂಡಿ ಇನ್ನೂ ಮುಂತಾದ ಪದಾರ್ಥಗಳ ಕಲಾಕೃತಿಗಳನ್ನು, ನೋಡಿದವರು ಭೇಷ್ ಎನ್ನುವಂತೆ ಸೃಷ್ಟಿಸಿದರು. ನೋಡುಗರ ಆ ಮೆಚ್ಚುಗೆಯೇ ಈ ಕಲೆಯ ಬಗ್ಗೆ ಅವರಲ್ಲಿ ಮತ್ತಷ್ಟು ಉತ್ಸಾಹ ತುಂಬಿತ್ತು.

ಮೊದಲು ಮನೆಯಲ್ಲಿ ಆಲಂಕಾರಿಕವಾಗಿ ಈ ಮಿನಿಯೇಚರ್‌ಗಳನ್ನು ಬಳಸತೊಡಗಿದರು. ಫ್ರಿಜ್, ಅಲ್ಮೆರಾ ಮುಂತಾದ ಕಬ್ಬಿಣದ ವಸ್ತುಗಳಿಗೆ ಮ್ಯಾಗ್ನೆಟ್ ಅಂಟಿಸಿದ ಈ ಮಿನಿಯೇಚರ್‌ಗಳನ್ನು ಆಲಂಕಾರಿಕವಾಗಿ ಬಳಸಿದರು. ಇವುಗಳನ್ನು ಕಂಡವರು ಖುಷಿಯಿಂದ ತಮಗೂ ಬೇಕೆಂಬ ಬೇಡಿಕೆ ಮುಂದಿಟ್ಟರು. ಆನಂತರ ದಸರಾ ಹಬ್ಬದಲ್ಲಿ ಗೊಂಬೆಗಳ ಜೊತೆ ಈ ಮಿನಿಯೇಚರ್‌ಗಳು ರಾರಾಜಿಸಲು ಆರಂಭವಾದವು.

ಆರಂಭದಲ್ಲಿ ಮಾರುಕಟ್ಟೆಯಲ್ಲಿ ಸಿಗುವ ರೆಡಿಮೇಡ್ ಕ್ಲೇ ಬಳಸುತ್ತಿದ್ದರು ದೀಪಾ. ಆನಂತರ ಕಾರ್ನ್‌ಫ್ಲೋರ್, ಅಂಟು ಮತ್ತು ಕೆಲವು ಪ್ರಿಸರ್ವೇಟಿವ್‌ಗಳನ್ನು ಕಡಿಮೆ ಉರಿಯಲ್ಲಿ ಚೆನ್ನಾಗಿ ಬೇಯಿಸಿ ತಾವೇ ಕ್ಲೇ ತಯಾರಿಸಿದರು. ಹೀಗೆ ಸಿದ್ಧವಾದ ಮಿಶ್ರಣದೊಂದಿಗೆ ಚಿಕ್ಕ ಚಿಕ್ಕ ಕಲಾಕೃತಿಗಳನ್ನು ರಚಿಸಲು ತೊಡಗಿದರು. ಕಳೆದ ಆರು ವರ್ಷಗಳಿಂದ ಈ ಮಿನಿಯೇಚರ್ ಕಲೆಯಲ್ಲಿ ದೀಪಾ ತೊಡಗಿಕೊಂಡಿದ್ದಾರೆ.

ಮಿನಿಯೇಚರ್ ಕಲೆ ಜೊತೆಗೆ ಚಿತ್ರಕಲೆಯಲ್ಲೂ ಇವರದ್ದು ಎತ್ತಿದ ಕೈ. ತಾಂಜಾವೂರು ಪೇಂಟಿಂಗ್, ಕೇರಳ ಮ್ಯೂರಲ್, ಮಂಡಲ ಕಲೆ, ಮಧುಬನಿ, ವರ್ಲಿ ಕಲೆ ಇನ್ನಿತರ ಪ್ರಕಾರಗಳಲ್ಲಿ ಪಳಗಿದ್ದಾರೆ.

ಈ ಸೂಕ್ಷ್ಮ ಕಲೆಯನ್ನು ತಾವೂ ಕಲಿಯಬೇಕೆಂದು ಹಲವು ಮಂದಿ ಇವರ ಬಳಿ ಬಂದಿದ್ದಾರೆ. ಹಾಗೆ ಬಂದವರಿಗೆ ಈ ಕಲೆಯನ್ನು ಪ್ರೀತಿಯಿಂದ ಕಲಿಸುತ್ತಾರೆ ದೀಪಾ. ಕಾರ್ಯಾಗಾರ, ಆನ್‌ಲೈನ್ ಮುಖಾಂತರ ಕಲಾಸಕ್ತರಿಗೆ ತರಬೇತಿ ನೀಡಿದ್ದಾರೆ. ಹಲವು ಕಡೆ ಈ ಪುಟಾಣಿ ವಸ್ತುಗಳ ಪ್ರದರ್ಶನವನ್ನೂ ನೀಡಿದ್ದಾರೆ.

'ಈ ಪುಟಾಣಿ ವಸ್ತುಗಳನ್ನು ನೋಡಿದವರು ಕಣ್ಣರಳಿಸಿ ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಜನರ ಆ ಮೆಚ್ಚುಗೆಯೇ ನನಗೆ ಖುಷಿ' ಎಂದು ಸಂತಸದಿಂದ ಹೇಳುತ್ತಾರೆ ದೀಪಾ.

ಪ್ರತಿಕ್ರಿಯಿಸಿ: feedback@sudha.co.in